೧) ಕೆಲವು ಪ್ರಕರಣಗಳಲ್ಲಿ ಇಲಾಖೆಗಳು ಕೆಳಹಂತದ ಮಾಹಿತಿಗಳನ್ನು ಕ್ರೋಢೀಕರಿಸುವಲ್ಲಿ ವಿಳಂಬವಾಗುತ್ತದೆ.

೨) ಕೆಲವು ಪ್ರಕರಣಗಳಲ್ಲಿ ಅಂದರೆ ವಿಧವಾ ವೇತನ, ವೃದ್ಧಾಪ್ಯ ವೇತನ ಮುಂತಾದುವುಗಳಲ್ಲಿ ಅರ್ಜಿದಾರರು ಪೂರ್ಣ ಮಾಹಿತಿಯನ್ನು ಸಲ್ಲಿಸದೆ ಇರುವುದು.

೩) ಭೂಸ್ವಾಧೀನ, ಜಮೀನು ಮಂಜೂರಾತಿ ಮತ್ತಿತರೆ ಪ್ರಕರಣಗಳಲ್ಲಿ ಅದರದೇ ಆದ ಸಮಯವನ್ನು ತೆಗೆದುಕೊಳ್ಳುವುದು. ಈ ಕಾರಣಗಳಿಂದ ಇಲಾಖೆಗಳು ಸಾರ್ವಜನಿಕ ದೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರ ಕಳುಹಿಸಲು ವಿಳಂಬವಾಗುತ್ತದೆ.

ವಿಷಯ:- ಮಂತ್ರಿಗಳ ನೇಮಕದಲ್ಲಿ ಅನುಸರಿಸಲಾದ ವಿಧಾನಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೨:- (೫೦೪)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂತ್ರಿಗಳನ್ನು ನೇಮಕ ಮಾಡುವಾಗ ಅನುಸರಿಸುವ ವಿಧಾನಗಳೇನು?
ಆ) ಮಂತ್ರಿಗಳನ್ನು ನೇಮಕ ಮಾಡುವಾಗ ಆಡಳಿತ ಸುಧಾರಣಾ ಸಮಿತಿ ಕೊಟ್ಟಿರುವ ವರದಿಯನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದೇ?
ಇ) ಮಂತ್ರಿಗಳಿಗೆ ವಿಧಿಸಿರುವ ನೀತಿ ಸಂಹಿತೆಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

ಮಂತ್ರಿಗಳನ್ನು ನೇಮಕಮಾಡುವಾಗ ಅಂತಹ ವ್ಯಕ್ತಿಗಳ ರಾಜಕೀಯ ವ್ಯಕ್ತಿತ್ವ ವೈಯಕ್ತಿಕ ಪ್ರಾಮಾಣಿಕತೆ ಬೌದ್ಧಿಕ ಸಾಮರ್ಥ್ಯ ಹಾಗೂ ಕಾರ್ಯ ಭಾರವನ್ನು ಹೊರುವ ಸಾಮರ್ಥ್ಯ ಇವುಗಳ ಬಗ್ಗೆ ವಿಶೇಷಗಮನವನ್ನು ನೀಡಲಾಗುವುದು.

ಆಡಳಿತ ಸುಧಾರಣೆ ಸಮಿತಿಯ ವರದಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಗಮನಕ್ಕೆ ತೆಗೆದುಕೊಳ್ಳಲಾಗುವುದು.

ದಿನಾಂಕ ೨೫-೧೧-೧೯೯೨ರ ಸುತ್ತೋಲೆ ಸಂಖ್ಯೆ ಸಿಆಸುಇ ೭೩ ಶಿಸನೆ ೯೨ರಲ್ಲಿ ಸಚಿವರಿಗೆ ನೀತಿ ಸಂಹಿತೆಯನ್ನು ವಿಧಿಸಲಾಗಿದೆ. ಅದರ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಸರ್ಕಾರಿ ಸುತ್ತೋಲೆ ಸಂಖ್ಯೆ : ಡಿ.ಪಿ.ಎ.ಆರ್.೭೩ ಜಿಎಎಂ ೯೨.. ದಿನಾಂಕ: ೨೫ನೇ ನವೆಂಬರ್ ೧೯೯೨.

ವಿಷಯ:- ಸಚಿವರಿಗೆ ನೀತಿ ಸಂಹಿತೆ

ಸರ್ಕಾರದ ಪ್ರಕಾರ್ಯಗಳನ್ನು ವ್ಯವಸ್ಥಿತವಾಗಿ ನಿಯಂತ್ರಣಗೊಳಿಸುವ ಉದ್ದೇಶಕ್ಕಾಗಿ ಹಾಗೂ ಅದರ ಘನತೆ ಮತ್ತು ಗೌರವವನ್ನು ಕಾಪಾಡುವ ದೃಷ್ಟಿಯಿಂದ, ಸರ್ಕಾರವು ರಾಜ್ಯ ಸರ್ಕಾರದ ಮಂತ್ರಿಮಂಡಲದ ಸದಸ್ಯರು ಒಂದು ನೀತಿ ಸಂಹಿತೆಗೆ ತಮ್ಮನ್ನು ಒಳಪಡಿಸಿಕೊಳ್ಳುವುದು ಅವಶ್ಯಕವೆಂದು ಪರಿಗಣಿಸಿದೆ.ತದನುಸಾರವಾಗಿ, ಎಲ್ಲಾ ಸಚಿವರ ಮಾರ್ಗದರ್ಶನಕ್ಕಾಗಿ ಮತ್ತು ಅವರಿಂದ ಪರಿಪಾಲನೆಗೊಳ್ಳಲು ಈ ಕೂಡಲೇ ಜಾರಿಗೆ ಬರುವಂತೆ, ಈ ಮುಂದಿನ ನೀತಿ ಸಂಹಿತೆಯನ್ನು ಈ ಮೂಲಕ ವಿಧಿಸಲಾಗಿದೆ:-

೧) ಭಾರತ ಸರ್ಕಾರವು ವಿಧಿಸಿದ ನೀತಿ ಸಂಹಿತೆಗೆ ಬದ್ದರಾಗಿರತಕ್ಕದ್ದು. ಕೇಂದ್ರ ಗೃಹ ಸಚಿವರ ಅ.ಸ.ಪತ್ರ ಸಂಖ್ಯೆ:೧೦-೪-೪೫ ಎಂ ಮತ್ತು ಸಿ, ದಿನಾಂಕ:೧೬-೩-೯೧ ನೋಡಿ (ಅನುಬಂಧ ನೋಡಿ)

೨) ದಿನನಿತ್ಯದ ಮಾಮೂಲಿ ಕಾರ್ಯದಂತೆ, ಸಚಿವರು ತಮ್ಮ ಕಛೇರಿ ಕಾಗದ ಪತ್ರಗಳು ಹಾಗೂ ಇತರೆ ಕೆಲಸಗಳನ್ನು ಬೆಳಿಗ್ಗೆ ೧೦-೩೦ ರಿಂದ ಮಧ್ಯಾಹ್ನ ೧-೩೦ರ ತನಕ ತಮ್ಮ ಕಛೇರಿಯಲ್ಲಿ ಗಮನಿಸತಕ್ಕದ್ದು ಮತ್ತು ಅದಷ್ಟು ಭೇಟಿಯ ಸಮಯವನ್ನು ನಿಗಧಿಪಡಿಸಿ, ಮಧ್ಯಾಹ್ನ ೩-೩೦ ರಿಂದ ೫-೩೦ರ ನಡುವಿನ ಅವಧಿಯಲ್ಲಿ ಸಂದರ್ಶಕರನ್ನು ಭೇಟಿ ಮಾಡಬೇಕು.

೩) ಸಚಿವರು, ಕಛೇರಿ ಮತ್ತು ಸಾರ್ವಜನಿಕ ಕಾರ್ಯಕ್ರಮಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ, ಕಾಲನಿಷ್ಠೆ ಪಾಲಿಸುವುದರಿಂದ ಇತರರಿಗೆ ಮಾದರಿಯಾಗಿರಬೇಕು.

೪) ಸಚಿವರು ಪ್ರವಾಸ ಕಾಲದಲ್ಲಿ ತಮ್ಮ ವಾಸ್ತವ್ಯ ಮತ್ತು ಇತರ ವ್ಯವಸ್ಥೆಗಳಿಗೆ ತಗಲುವ ವೆಚ್ಚಗಳನ್ನು ಇತರರಂತೆಯೇ ತಾವೂ ಭರಿಸಬೇಕು.

೫) ಅಡಂಬರಯುತವಾದ ಮತ್ತು ಅದ್ದೂರಿಯ ವ್ಯವಸ್ಥೆಗಳಿಗೆ ಉತ್ತೇಜನ ನೀಡಬಾರದು.

೬) ಸಚಿವರನ್ನು ಹಿಂಬಾಲಿಸುವ ಕಾರುಗಳ ಮತ್ತು ಅಧಿಕಾರಿಗಳ ಸಂಖ್ಯೆಯು ಅಗತ್ಯವಾದ ವ್ಯಕ್ತಿಗಳಿಗಷ್ಟಕ್ಕೆ ಸೀಮಿತವಾಗಿರಬೇಕು.

೭) ಒಂದೇ ಸಮಾರಂಭದಲ್ಲಿ ಹಲವಾರು ಸಚಿವರು ಪಾಲ್ಗೊಳ್ಳುವುದನ್ನು ಸಾಧ್ಯವಾದಷ್ಟು ತಪ್ಪಿಸಬೇಕು ಮತ್ತು ಅಂಥ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುವ ಪರಿಪಾಠವನ್ನು ನಿಲ್ಲಿಸಬೇಕು.

೮) ಸಚಿವರು, ಸಾಧ್ಯವಾದಷ್ಟು ಮೌಖಿಕ ಸೂಚನೆಗಳನ್ನು ನೀಡುವುದನ್ನು ನಿಲ್ಲಿಸಬೇಕು ಅವರು ಅಂಥ ಆದೇಶಗಳನ್ನು ಲಿಖಿತದಲ್ಲಿ ಸ್ಥಿರೀಕರಿಸಬೇಕು.

೯) ನೌಕರರು ಶಿಸ್ತನ್ನು ಸರಿಯಾಗಿ ಪಾಲಿಸುವಂತೆ ಮಾಡಲು ಅಧಿಕಾರ ಪಾಹಿ ವರ್ಗ ರಾಜಕೀಯದಲ್ಲಿ ತೊಡಗುವ ಪ್ರವೃತಿಯನ್ನು ಕಟ್ಟುನಿಟ್ಟಾಗಿ ತಪ್ಪಿಸಲು ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಸೂಚನೆಗಳನ್ನು ಸಾಮಾನ್ಯವಾಗಿ ಅಧಿಕೃತ ಅಧಿಕಾರಗಳ ಮೂಲಕವೇ ಅಂದರೆ, ಕಾರ್ಯದರ್ಶಿಯ ಮೂಲಕವೇ ಕಳುಹಿಸಿಕೊಡಬೇಕು.

೧೦) ಸರ್ಕಾರಿ ನೌಕರರ ವರ್ಗಾವಣೆಗಳಿಗೆ ವಿಧಿಸಲಾದ ಸಾಮಾನ್ಯ ನೀತಿಗಳಿಗೆ ಸಚಿವರು ಬದ್ಧರಾಗಿರಬೇಕು. ವರ್ಗಾವಣೆಯ ಅಧಿಕಾರಿಗಳನ್ನು ಪ್ರತ್ಯಾಯೋಜಿಸುವಲ್ಲಿ ಅವರು ಹಸ್ತಕ್ಷೇಪ ಮಾಡಬಾರದು. ನ್ಯಾಯೋಚಿತವಾದ ಕಾರಣಗಳ ನಿಮಿತ್ತ ಅಪವಾದವಾಗುವಂಥ ಪ್ರಸಂಗಗಳನ್ನು ಸಾಧ್ಯವಾದಷ್ಟು ಕಡಿಮೆ ಇರುವಂತೆ ನೋಡಿಕೊಳ್ಳಬೇಕು.

೧೧) ಸಚಿವರು ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರ ಆಸ್ತಿ ಮತ್ತು ಹೊಣೆಗಳ ವಿವರಣೆಗಳನ್ನು ನಿಯಮಿತ ನಮೂನೆಯಲ್ಲಿ ಲೋಕಾಯುಕ್ತರಿಗೆ ಸಲ್ಲಿಸತಕ್ಕದ್ದು.

೧೨) ಸಚಿವರಿಗೆ ಹಂಚಿಕೆ ಮಾಡಲಾದ ಎಲ್ಲಾ ಕಾರ್ಯಕಲಾಪಗಳನ್ನು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳು) ನಿಯಮಗಳು, ೧೯೭೭ ಮತ್ತು ಕರ್ನಾಟಕ ಸರ್ಕಾರದ ಕಾರ್ಯಕಲಾಪಗಳ ಹಂಚಿಕೆ ನಿಯಮಗಳು, ೧೯೭೭ರ ಉಪಬಂಧಗಳಿಗೆ ಅನುಸಾರವಾಗಿ ತಮ್ಮ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳ ಮೂಲಕ ಅಥವಾ ಅದರ ಮೇರೆಗೆ ನಿರ್ವಹಿಸತಕ್ಕದ್ದು.

೧೩) ಸಚಿವರು ಭಾರತ ಸರ್ಕಾರಿ ರಹಸ್ಯಗಳ ಅಧಿನಿಯಮ, ೧೯೨೩ರ ಉಪಬಂಧಗಳನ್ನು ಮತ್ತು ಸರ್ಕಾರದ ರಹಸ್ಯಗಳಿಗೆ ಸಂಬಂಧಿಸಿದಂತೆ ಕಾನೂನಿನಲ್ಲಿ ಆಗಿಂದಾಗ್ಗೆ ಮಾಡಲಾಗಿರುವ ಬದಲಾವಣೆಗಳನ್ನು ಸ್ವತಃ ಚೆನ್ನಾಗಿ ತಿಳಿದುಕೊಂಡಿರಬೇಕು ಮತ್ತು ಅವರು ಪ್ರತ್ಯಕ್ಷವಾಗಿ ಆಗಲಿ ಅಥವಾ ಪರೋಕ್ಷವಾಗಿ ಆಗಲಿ, ಯಾವುದೇ ರಹಸ್ಯವನ್ನು ಬಯಲು ಮಾಡತಕ್ಕದ್ದಲ್ಲ.

೧೪) ಸಚಿವರು ಸಾರ್ವಜನಿಕ ನಿಧಿಯಿಂದ ವೆಚ್ಚ ಮಾಡುವುದಕ್ಕೆ ಅಧಿಕಾರ ನೀಡುವಾಗ, ಸಾಮಾನ್ಯ ವಿವೇಕವಿರುವ ಒಬ್ಬ ವ್ಯಕ್ತಿಯು ತನ್ನ ಸ್ವಂತ ಹಣದ ವಿಷಯದಲ್ಲಿ ಯಾವ

ಎಚ್ಚರಿಕೆಯನ್ನು ವಹಿಸುವನೋ ಅದೇ ಎಚ್ಚರಿಕೆಯನ್ನು ವಹಿಸಬೇಕು ಮತ್ತು ಆರ್ಥಿಕ ಔಚಿತ್ಯ ಸೂತ್ರದಲ್ಲಿ ಹೇಳಿರುವರತೆ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ, ತನ್ನ ಸ್ವಂತಕ್ಕೆ ಪ್ರಯೋಜನವಾಗುವಂತಿದ್ದಲ್ಲಿ ತಾನು ಮಂಜೂರು ಮಾಡಬಹುದಾದ ಅಧಿಕಾರಗಳನ್ನು ಮೀರಿ ಯಾವುದೇ ವೆಚ್ಚವನ್ನು ಮಂಜೂರು ಮಾಡತಕ್ಕದ್ದಲ್ಲ, ಇಲ್ಲವೇ ಅಧಿಕಾರಗಳನ್ನು ಚಲಾಯಿಸತಕ್ಕುದ್ದಲ್ಲ, ಅವರು ಸಾರ್ವಜನಿಕ ಹಣವನ್ನು ಒಂದು ನಿರ್ದಿಷ್ಟ ವ್ಯಕ್ತಿಯ ಅಥವಾ ಒಂದು ಸಮುದಾಯ ವರ್ಗದ ಪ್ರಯೋಜನಕ್ಕಾಗಿ, ಅಂತಹ ಕ್ಷೇಮು ಸರ್ಕಾರದ ಒಂದು ನಿಶ್ಚಿತ ನೀತಿಗೆ ಅನುಗುಣವಾಗಿದ್ದ ಹೊರತು ಬಳಸತಕ್ಕುದಲ್ಲವೆಂಬುದನ್ನು ಪಾಲಿಸತಕ್ಕದು.

೧೫) ಸಚಿವರು, ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ಸರ್ಕಾರದಿಂದ ಅವರಿಗೆ ಒದಗಿಸಲಾದ ಸೌಲಭ್ಯಗಳನ್ನು ದುರುಪಯೋಗಪಡಿಸಿಕೊಳ್ಳತಕ್ಕುದಲ್ಲ ಅಥವಾ ಅಜಾಗರೂಕತೆಯಿಂದ ಉಪಯೋಗಿಸತಕ್ಕುದಲ್ಲ.

೧೬) ಸಚಿವರು ತಮ್ಮ ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸುವ ಪರಿಣಾಮಕಾರಿ ವ್ಯವಸ್ಥೆಯೊಂದರ ಮೂಲಕ ತಮ್ಮ ಕ್ರಮಗಳಿಗೆ ಜವಾಬ್ದಾರರಾಗಿರುವಂತೆ ನೋಡಿಕೊಳ್ಳತಕ್ಕುದು.

೧೭) ಸಚಿವರಾಗಿ ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ಅವರಿಗೆ ಸಂದಿಗ್ಧತೆಯುಂಟು ಮಾಡುವ ಯಾವುದೇ ಕೆಲಸ ಮಾಡಲು ತಮ್ಮ ಕುಟುಂಬದ ಸದಸ್ಯರಿಗೆ ಸಚಿವರು ಅವಕಾಶ ನೀಡತಕ್ಕುದಲ್ಲ.

೧೮) ತಮ್ಮ ಅಧಿಕೃತ ಕರ್ತವ್ಯ ನಿರ್ವಹಣೆಯಲ್ಲಿ ಮುಜುಗರ ಉಂಟುಮಾಡುವಂತಹ ಅಥವಾ ಪ್ರಭಾವ ಬೀರುವಂಥ ಸ್ವರೂಪದ ಸಾಲ ಪಡೆಯಲು ಅವರ ಕುಟುಂಬದ ಸದಸ್ಯರಿಗೆ ಸಚಿವರು ಅನುಮತಿಸತಕ್ಕುದಲ್ಲ.

೧೯) ಮಾನ್ಯತೆ ಪಡೆದ ಸಂಸ್ಥೆಗಳು ವೆಚ್ಚವನ್ನು ಭರಿಸುವ ಸಂದರ್ಭಗಳ ಹೊರತು ಸಚಿವರು ತಮ್ಮ ಪ್ರವಾಸ ಸಮಯದಲ್ಲಿ ಬಾಡಿಗೆ, ಆಹಾರ ಮತ್ತು ಇತರ ಸರಬರಾಜುಗಳಿಗೆ ತಗಲುವ ವೆಚ್ಚವೂ ಒಳಗೊಂಡಂತೆ ಪ್ರವಾಸಕ್ಕೆ ತಗಲುವ ಪ್ರಾಸಂಗಿಕ ವೆಚ್ಚದ ಎಲ್ಲಾ ಬೆಲೆಗಳನ್ನು ತಾವೇ ಸಂದಾಯ ಮಾಡತಕ್ಕದು.

೨೦) ಸಚಿವರು ತಮ್ಮ ನಿಯಂತ್ರಣದಲ್ಲಿ ಬರದಂಥ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಯಾವುದೇ ಸಾರ್ವಜನಿಕ ಹೇಳಿಕೆ ನೀಡತಕ್ಕದಲ್ಲ.

ಸುತ್ತೋಲೆ ಸಂಖ್ಯೆ, ಡಿಪಿಎಆರ್ ೭೩ ಜಿಎಎಂ ೯೨ಕ್ಕೆ ಅನುಬಂಧ

ಭಾರತ ಸರ್ಕಾರ

ಗೃಹ ವ್ಯವಹಾರಗಳ ಮಂತ್ರಾಲಯ

ಸಚಿವರಿಗೆ ನೀತಿ ಸಂಹಿತೆ

(ಕೇಂದ್ರ ಮತ್ತು ರಾಜ್ಯ ಎರಡರ)

ಸಂವಿಧಾನ, ಪ್ರಜಾಪ್ರಾತಿನಿಧ್ಯ ಅಧಿನಿಯಮ, ೧೯೫೧ರ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳನ್ನು ಪಾಲಿಸುವುದರ ಜೊತೆಗೆ ಒಬ್ಬ ವ್ಯಕ್ತಿಯು ಸಚಿವರಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು:

ಎ) ತನ್ನ ಹಾಗೂ ತನ್ನ ಕುಟುಂಬದ ಸದಸ್ಯರ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಹಾಗೂ ವ್ಯವಹಾರ ಹಿತಾಸಕ್ತಿಗಳ ವಿವರಗಳನ್ನು ಪ್ರಧಾನ ಮಂತ್ರಿಯವರಿಗೆ ಅಥವಾ ಸಂದರ್ಭಾನುಸಾರ ಮುಖ್ಯ ಮಂತ್ರಿಯವರಿಗೆ ತಿಳಿಸತಕ್ಕುದು. ಬಹಿರಂಗ ಪಡಿಸಬೇಕಾದ ವಿವರಗಳಲ್ಲಿ ಎಲ್ಲಾ

ಸ್ಥಿರಾಸ್ತಿಗಳ ವಿವರಗಳು ಮತ್ತು (೧) ಷೇರುಗಳು ಹಾಗೂ ಡಿಬೆಂಚರುಗಳ (೨) ನಗದು ಹಣದ (೩) ಆಭರಣಗಳ ಒಟ್ಟು ಅಂದಾಜು ಬೆಲೆ ಇವು ಒಳಗೊಂಡಿರತಕ್ಕುದು.

ಬಿ) ಆತ ಸಚಿವರಾಗಿ ನೇಮಕವಾಗುವುದಕ್ಕೆ ಮೊದಲು ತಾವು ಹಿತಾಸಕ್ತಿ ಹೊಂದಿದ್ದ ಯಾವುದೇ ವ್ಯವಹಾರಗಳನ್ನು ನಡೆಸುವುದರಲ್ಲಿ ಮತ್ತು ವ್ಯವಹಾರದ ಆಡಳಿತ ನಿರ್ವಹಣೆಯಲ್ಲಿ ತನ್ನ ಒಡೆತನವನ್ನು ಬಿಟ್ಟು ಕೊಡುವುದೊಂದನ್ನುಳಿದು ಉಳಿದೆಲ್ಲಾ ಸಂಬಂಧಗಳನ್ನು ಕಳೆದುಕೊಳ್ಳತಕ್ಕುದು. ಮತ್ತು,

ಸಿ) ಸಂಬಂಧಪಟ್ಟ ಸರ್ಕಾರಕ್ಕೆ ಅಥವಾ ಆ ಸರ್ಕಾರದ ಉದ್ಯಮಕ್ಕೆ (ವ್ಯಾಪಾರ ಅಥವಾ ವ್ಯವಹಾರದ ಮಾಮೂಲಿ ಕ್ರಮದಲ್ಲಿ ಹಾಗೂ ಮಾನಕ ಅಥವಾ ಮಾರುಕಟ್ಟೆ ದರಗಳಲ್ಲಿ ಹೊರತು ಪಡಿಸಿ) ಸರಕುಗಳು ಅಥವಾ ಸೇವೆಗಳನ್ನು ಸರಬರಾಜು ಮಾಡುವಂತಹ ವ್ಯಾಪಾರ ವ್ಯವಹಾರ ಸಂಸ್ಥೆಗೆ ಸಂಬಂಧಿಸಿದಂತೆ ಅಥವಾ ಯಾರ ವ್ಯಾಪಾರ ವ್ಯವಹಾರವು ಸಂಬಂಧಪಟ್ಟ ಸರ್ಕಾರದಿಂದ ಪಡೆಯಲಾದ ಅಥವಾ ಪಡೆಯುವಂಥ ಲೈಸನ್ಸ್‌ಗಳು, ಪರ್ಮಿಟ್ಟುಗಳು, ಕೋಟಾಗಳು, ಗುತ್ತಿಗೆಗಳು ಇತ್ಯಾದಿಗಳ ಮೇಲೆ ಪ್ರಧಾನವಾಗಿ ಅವಲಂಬಿಸಿರುತ್ತದೋ ಅವರು ಅಂತಹ ವ್ಯಾಪಾರ ವ್ಯವಹಾರದಲ್ಲಿನ ಹಾಗೂ ಅದರ ಆಡಳಿತ ನಿರ್ವಹಣೆಯಲ್ಲಿನ ತಮ್ಮ ಎಲ್ಲಾ ಹಿತಾಸಕ್ತಿಗಳನ್ನು ತಾವಾಗಿಯೇ ಬಿಟ್ಟು ಕೊಡತಕ್ಕುದು.

ಆದಾಗ್ಯೂ, (ಬಿ) ಆಡಳಿತ ಮಂಡಲಿಯಲ್ಲಿನ ತನ್ನ ಹಿತಾಸಕ್ತಿಯ ವಿಷಯದಲ್ಲಿ ಹಾಗೂ (ಸಿ) ಒಡೆತನ ಮತ್ತು ಆಡಳಿತ ಮಂಡಲಿ ಎರಡರ ವಿಷಯದಲ್ಲಿ ಸದರಿ ವ್ಯವಹಾರವನ್ನು ನಡೆಸುವ ಅಥವಾ ಅದರ ಆಡಳಿತ ನಿರ್ವಹಣೆ ಅಥವಾ ಒಡೆತನ ಇವುಗಳಿಗೆ ಸಂಬಂಧಿಸಿದಂತೆ ಸಚಿವರಾಗಿ ತಾವು ನೇಮಕವಾಗುವುದಕ್ಕೆ ಮೊದಲು ಸಹಭಾಗಿಯಾಗಿದ್ದ ಒಬ್ಬ ವ್ಯಕ್ತಿ ತನ್ನ ಹಿತಾಸಕ್ತಿಗಳನ್ನು, ತನ್ನ ಹೆಂಡತಿಯನ್ನು ಹೊರತು ಪಡಿಸಿ (ಸಂದರ್ಭಾನುಸಾರ ಗಂಡ) ತನ್ನ ಕುಟುಂಬದ ಯಾವುದೇ ವಯಸ್ಕ ಸದಸ್ಯನಿಗೆ ಅಥವಾ ವಯಸ್ಕ ಸಂಬಂಧಿಗೆ ವರ್ಗಾಯಿಸಬಹುದು. ಆತನ ಹಿತಾಸಕ್ತಿಗಳನ್ನು ತಾನೇ ಬಿಟ್ಟುಕೊಡುವ ವಿಷಯವು ಪಬ್ಲಿಕ್ ಲಿಮಿಟೆಡ್ ಕಂಪನಿಗಳಲ್ಲಿ ಷೇರುಗಳನ್ನು ಧಾರಣ ಮಾಡಿರುವ ಸಂಬಂಧದಲ್ಲಿ ಹಾಗೆ ಅವನು ಧಾರಣ ಮಾಡಿರುವುದರ ಸ್ವರೂಪ ಮತ್ತು ಪ್ರಮಾಣವು ತನ್ನ ಅಧಿಕೃತ ಕರ್ತವ್ಯಗಳ ನಿರ್ವಹಣೆಯಲ್ಲಿ ಆತನಿಗೆ ಸಂದಿಗ್ಧತೆಯನ್ನುಂಟು ಮಾಡುವ ಸಂಭವವಿದೆಯೆಂದು ಪ್ರಧಾನ ಮಂತ್ರಿಗಳು ಅಥವಾ ಸಂದರ್ಭಾನುಸಾರ ಮುಖ್ಯಮಂತ್ರಿಗಳು ಪರಿಗಣಿಸಿದ ಸಂದರ್ಭದಲ್ಲಿ ಹೊರತು ಉದ್ಭವಿಸುವುದಿಲ್ಲ.

೨. ಅಧಿಕಾರವನ್ನು ವಹಿಸಿಕೊಂಡ ನಂತರ ಹಾಗೂ ಅಧಿಕಾರದಲ್ಲಿರುವಷ್ಟು ಸಮಯ ಸಚಿವರು:-

ಎ) ತಮ್ಮ ಆಸ್ತಿಗಳು ಮತ್ತು ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಘೋಷಣೆಯನ್ನು ಪ್ರಧಾನ ಮಂತ್ರಿಗಳು ಅಥವಾ ಸಂದರ್ಭಾನುಸಾರ ಮುಖ್ಯಮಂತ್ರಿಗಳಿಗೆ ಪ್ರತಿ ವರ್ಷ ಮಾರ್ಚ್ ೩೧ರ ವೇಳೆಗೆ ಒದಗಿಸತಕ್ಕದ್ದು.

ಬಿ) ಯಾವುದೇ ಸ್ಥಿರಾಸ್ತಿಯನ್ನು, ಅಂತಹ ಸ್ಥಿರಾಸ್ತಿಯನ್ನು ಸರ್ಕಾರ ವು ಮಾಮೂಲಿ ಕ್ರಮದಲ್ಲಿ ಕಡ್ಡಾಯವಾಗಿ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಹೊರತು ಅದನ್ನು ಸರ್ಕಾರದಿಂದ ಖರೀದಿಸುವ ಅಥವಾ ಸರ್ಕಾರಕ್ಕೆ ಮಾರಾಟ ಮಾಡುವ **ಪ್ರಯತ್ನ ಮಾಡಬಾರದು.**

ಸಿ) ಯಾವುದೇ ವ್ಯವಹಾರವನ್ನು ಪ್ರಾರಂಭಿಸಬಾರದು ಅಥವಾ ಯಾವುದೇ ವ್ಯವಹಾರದಲ್ಲಿ ಸೇರಬಾರದು.

ಡಿ) ತನ್ನ ಕುಟುಂಬದ ಸದಸ್ಯರು ಆ ಸರ್ಕಾರಕ್ಕೆ ಸರಕುಗಳು ಮತ್ತು ಸೇವೆಯನ್ನು ಪೂರೈಸುವ ಕಾರ್ಯದಲ್ಲಿ ನಿರತರಾಗಿರುವ ಅಥವಾ ಆ ಸರ್ಕಾರದಿಂದ ಲೈಸನ್ಸುಗಳು, ಪರ್ಮಿಟ್ಟುಗಳು, ಕೋಟಾಗಳು, ಗುತ್ತಿಗೆಗಳು ಮುಂತಾದವುಗಳ ಮಂಜೂರಾತಿಯ ಮೇಲೆ ಪ್ರಧಾನವಾಗಿ ಅವಲಂಬಿಸಿರುವಂತಹ ವ್ಯಾಪಾರ ವ್ಯವಹಾರ ಸಂಸ್ಥೆಗಳನ್ನು ಪ್ರಾರಂಭಿಸಿಲ್ಲ ಅಥವಾ ಅವುಗಳಲ್ಲಿ ಭಾಗವಹಿಸಿಲ್ಲ (ವ್ಯಾಪಾರ ಅಥವಾ ಅವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಮತ್ತು ಮಾನಕ ಅಥವಾ ಮಾರುಕಟ್ಟೆ ದರದಲ್ಲಿ ಹೊರತು ಪಡಿಸಿ) ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಇ) ತನ್ನ ಕುಟುಂಬದ ಯಾವನೇ ಸದಸ್ಯ ಯಾವುದೇ ವ್ಯವಹಾರವನ್ನು ಸ್ಥಾಪಿಸಿದರೆ ಅಥವಾ ಯಾವುದೇ ವ್ಯವಹಾರವನ್ನು ನಡೆಸುವುದರಲ್ಲಿ ಮತ್ತು ಅದರ ಆಡಳಿತ ನಿರ್ವಹಣೆಯಲ್ಲಿ ಜೊತೆಗೂಡಿದರೆ ಆ ವಿಷಯವನ್ನು ಪ್ರಧಾನ ಮಂತ್ರಿಗಳು ಅಥವಾ ಸಂದರ್ಭಾನುಸಾರ ಮುಖ್ಯಮಂತ್ರಿಗಳಿಗೆ ವರದಿ ಮಾಡತಕ್ಕುದು.

೩.೧ ಯಾರೇ ಸಚಿವರು:-

ಎ) ಸ್ವತಃ ಅಥವಾ ತಮ್ಮ ಕುಟುಂಬದ ಒಬ್ಬ ಸದಸ್ಯನ ಮೂಲಕ ರಾಜಕಾರಣ, ಧರ್ಮಾದಾಯ ಅಥವಾ ಅನ್ಯಥಾ ಯಾವುದೇ ಉದ್ದೇಶಕ್ಕಾಗಿ ಕೊಡುಗೆಯನ್ನು ಸ್ವೀಕರಿಸತಕ್ಕುದಲ್ಲ. ಯಾವುದೇ ನೋಂದಾಯಿತ ಸಂಘ, ಧರ್ಮಾದಾಯ ಸಂಸ್ಥೆ, ಸಾರ್ವಜನಿಕ ಪ್ರಾಧಿಕಾರದಿಂದ ಮಾನ್ಯತೆ ಪಡೆದ ಸಂಸ್ಥೆ ಅಥವಾ ಒಂದು ರಾಜಕೀಯ ಪಕ್ಷಕ್ಕೆ ಕೊಡಲು ಉದ್ದೇಶಿಸಲಾದ ಯಾವುದೇ ಹಣ ಅಥವಾ ಚೆಕ್ಕನ್ನು ತಮಗೆ ನೀಡಿದರೆ ಅದನ್ನು ಸಾಧ್ಯವಾದಷ್ಟು ಬೇಗನೆ ಸಂಬಂಧಪಟ್ಟ ಸಂಘಸಂಸ್ಥೆಗೆ ತಲುಪಿಸತಕ್ಕುದು; ಮತ್ತು

(ಬಿ) (೧) ಒಂದು ನೋಂದಾಯಿತ ಸಂಘ ಅಥವಾ ಧರ್ಮಾದಾಯ ಸಂಸ್ಥೆ ಅಥವಾ ಒಂದು ಸಾರ್ವಜನಿಕ ಪ್ರಾಧಿಕಾರದಿಂದ ಮಾನ್ಯತೆ ಪಡೆದ ಒಂದು ಸಂಸ್ಥೆ, (೨) ಒಂದು ರಾಜಕೀಯ ಪಕ್ಷ ಇವುಗಳ ಪ್ರಯೋಜನಕ್ಕಾಗಿ ಹೊರತುಪಡಿಸಿ ನಿಧಿ ಸಂಗ್ರಹಿಸುವುದರಲ್ಲಿ ಸೇರಬಾರದು. ಆದರೂ ಇಂಥ ಕೊಡುಗೆಗಳನ್ನು ಸಂಬಂಧಪಟ್ಟ ಸಂಘ, ಅಥವಾ ನಿಕಾಯ ಅಥವಾ ಸಂಸ್ಥೆ ಅಥವಾ ಪಕ್ಷದ ನಿರ್ದಿಷ್ಟಪದಾಧಿಕಾರಿ ಮುಂತಾದವರಿಗೆ ಕಳುಹಿಸಲಾಗಿದೆಯೇ ಹೊರತು ತಮಗಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕುದು. ಇಲ್ಲಿ ಈ ಮೊದಲು ಹೇಳಿರುವುದಾವುದೂ, ಮೇಲೆ ತಿಳಿಸಲಾದಂತೆ ಸಂಗ್ರಹಿಸಲಾದ ನಿಧಿಗಳ ಬಟವಾಡೆಯ ಕಾರ್ಯದಲ್ಲಿ ಸಚಿವರನ್ನು ತೊಡಗಿಸತಕ್ಕುದಲ್ಲ.

೩.೨ ಕೇಂದ್ರ ಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ರಾಜ್ಯ ಸರ್ಕಾರಗಳ ಕೇಂದ್ರಾಡಳಿತ ಪ್ರದೇಶಗಳ ಇತರ ಮಂತ್ರಿಗಳು ಸೇರಿದಂತೆ ಒಬ್ಬ ಸಚಿವರು ಪ್ರಧಾನ ಮಂತ್ರಿಯವರ ಪೂರ್ವಾನುಮೋದನೆಯಿಲ್ಲದೇ ಭಾರತದಲ್ಲಿ ಅಥವಾ ವಿದೇಶದಲ್ಲಿ ಒಂದು ವಿದೇಶಿ ಸರ್ಕಾರದ ಅಡಿಯಲ್ಲಿ ಅಥವಾ ಒಂದು ವಿದೇಶಿ ಸಂಸ್ಥೆಯಲ್ಲಿ (ವಾಣಿಜ್ಯೋದ್ಯಮವು ಸೇರಿದಂತೆ) ಉದ್ಯೋಗವನ್ನು ಸ್ವೀಕರಿಸಲು ತಮ್ಮ ಪತ್ನಿ ಮತ್ತು ಅವಲಂಬಿತ ಸದಸ್ಯರಿಗೆ ಅನುಮತಿ ನೀಡತಕ್ಕುದಲ್ಲ. ಒಬ್ಬ ಸಚಿವರ ಪತ್ನಿ ಅಥವಾ ಅವಲಂಬಿತ ಸದಸ್ಯನು ಈಗಾಗಲೇ ಅಂಥ ಉದ್ಯೋಗದಲ್ಲಿದ್ದರೆ,ಉದ್ಯೋಗವನ್ನು ಮುಂದುವರಿಸಬೇಕೇ

ಅಥವಾ ಮುಂದುವರಿಸಬಾರದೇ ಎಂಬುದನ್ನು ನಿರ್ಧರಿಸಲು ಆ ವಿಷಯವನ್ನು ಪ್ರಧಾನ ಮಂತ್ರಿಯವರಿಗೆ ವರದಿ ಮಾಡತಕ್ಕುದು. ಒಂದು ವಿದೇಶೀ ಸಂಸ್ಥೆಯಲ್ಲಿನ ಉದ್ಯೋಗವನ್ನು ಸಂಪೂರ್ಣವಾಗಿ ನಿಷೇದಿಸಬೇಕೆಂಬುದನ್ನು ಸಾಮಾನ್ಯ ನಿಯಮವೆಂಬಂತೆ ಪರಿಗಣಿಸತಕ್ಕುದು.

೪.೧ ಯಾರೇ ಸಚಿವರು:-

ಎ) ನಿಕಟ ಸಂಬಂಧಿಗಳನ್ನು ಹೊರತುಪಡಿಸಿ ಯಾರಿಂದಲೂ ಅಮೂಲ್ಯವಾದ ಕಾಣಿಕೆಗಳನ್ನು ಸ್ವೀಕರಿಸತಕ್ಕುದಲ್ಲ, ಸರ್ಕಾರಿ ವ್ಯವಹಾರಗಳ ಸಂಬಂಧದಲ್ಲಿ ಸಂಪರ್ಕಹೊಂದಿರಬಹುದಾದ ಯಾವನೇ ವ್ಯಕ್ತಿಯಿಂದಲೂ ಅವರಾಗಲೀ, ಅವರ ಕುಟುಂಬದ ಸದಸ್ಯರಾಗಲೀ ಯಾವುದೇ ಕಾಣಿಕೆಗಳನ್ನು ಸ್ವೀಕರಿಸಬಾರದು; ಮತ್ತು.

ಬಿ) ತಮ್ಮ ಕಛೇರಿಯ ಕರ್ತವ್ಯಗಳ ನಿರ್ವಹಣೆಯಲ್ಲಿ ಪೇಚಿಗೀಡು ಮಾಡುವ ಅಥವಾ ಪ್ರಭಾವ ಬೀರುವ ಸಂಭವವಿರುವಂಥ ಸ್ವರೂಪದ ಸಾಲ ಪಡೆಯಲು ತಮ್ಮ ಕುಟುಂಬದ ಯಾರೇ ಸದಸ್ಯರಿಗೆ ಅನುಮತಿ ನೀಡತಕ್ಕುದಲ್ಲ.

೪.೨ ಒಬ್ಬ ಸಚಿವರು ವಿದೇಶಕ್ಕೆ ಹೋದಾಗ ಅಥವಾ ಭಾರತಕ್ಕೆ ಬಂದ ವಿದೇಶೀಯರು ಗಣ್ಯರಿಂದ ಕಾಣಿಕೆಗಳನ್ನು ಸ್ವೀಕರಿಸಬಹುದು. ಇಂಥ ಕಾಣಿಕೆಗಳಲ್ಲಿ ಎರಡು ಪ್ರವರ್ಗಗಳಿವೆ. ಮೊದಲನೇ ಪ್ರವರ್ಗದಲ್ಲಿ ಸನ್ಮಾನಪೂರ್ವಕವಾದ ಖಡ್ಗ,ಪೋಷಾಕುಗಳಂಥ ಸಾಂಕೇತಿಕ ಸ್ವರೂಪದ ಕಾಣಿಕೆಗಳು ಸೇರುತ್ತವೆ. ಇವುಗಳನ್ನು ಸನ್ಮಾನಿತರು ಇರಿಸಿಕೊಳ್ಳಬಹುದಾಗಿದೆ ಇಂಥ ಸಾಂಕೇತಿಕ ಸ್ವರೂಪದವುಗಳಲ್ಲದ ಕಾಣಿಕೆಗಳು ಎರಡನೇ ಪ್ರವರ್ಗಕ್ಕೆ ಸೇರುತ್ತವೆ. ಅವುಗಳ ಬೆಲೆಯು ರೂ. ೫೦೦೦-೦೦ಗಳಿಗಿಂತ ಕಡಿಮೆ ಇದ್ದರೆ ಸಚಿವರು ಅದನ್ನು ಇರಿಸಿಕೊಳ್ಳಬಹುದು. ಆದರೂ, ಕಾಣಿಕೆಯ ಅಂದಾಜು ಬೆಲೆಯ ಬಗ್ಗೆ ಯಾವುದೇ ಸಂದೇಹವಿದ್ದರೆ ವಿಷಯವನ್ನು ಬೆಲೆಯ ನಿರ್ಧರಣೆಗಾಗಿ ತೋಷಖಾನೆಗೆ ಕಳುಹಿಸಬೇಕು. ಬೆಲೆಯ ನಿರ್ಧರಣೆಯ ತರುವಾಯ ಕಾಣಿಕೆಯ ಬೆಲೆಯು, ಗೊತ್ತುಪಡಿಸಲಾದ ರೂ. ೫೦೦೦-೦೦ಗಳ ಪರಿಮಿತಿಯಲ್ಲಿಯೇ ಇರುವುದೆಂದು ಕಂಡುಬಂದರೆ ಕಾಣಿಕೆಯನ್ನು ಸಚಿವರಿಗೆ ಹಿಂದಿರುಗಿಸಲಾಗುವುದು. ಅದರ ಬೆಲೆಯು ರೂ. ೫೦೦೦-೦೦ಗಳನ್ನು ಮೀರಿದರೆ, ತೋಷಖಾನೆಯಿಂದ ನಿರ್ಧರಿಸಲಾದ ಬೆಲೆ ಮತ್ತು ರೂ. ೫೦೦೦-೦೦ಗಳ ನಡುವಣ ವ್ಯತ್ಯಾಸದಷ್ಟು ಮೊಬಲಗನ್ನು ಸಂದಾಯ ಮಾಡುವ ಮೂಲಕ ತೋಷಖಾನೆಯಿಂದ ಅದನ್ನು ಖರೀದಿಸುವ ಸ್ವಾತಂತ್ರ್ಯ ಸನ್ಮಾನಿತರಿಗೆ ಇರುತ್ತದೆ. ರೂ. ೫೦೦೦-೦೦ಗಳಿಗಿಂತ ಹೆಚ್ಚು ಬೆಲೆಯುಳ್ಳ ಕಾರ್ಪೆಟ್ಟುಗಳು, ವರ್ಣಚಿತ್ರಗಳು, ಪೀಠೋಪಕರಣಗಳು ಮುಂತಾದ ತೋಷಖಾನೆಯಲ್ಲಿ ಇರಿಸಿಕೊಳ್ಳಲಾಗುವ ಗೃಹೋಪಯೋಗಿ ವಸ್ತುಗಳಂಥ ಕಾಣಿಕೆಗಳನ್ನು ಮಾತ್ರ ರಾಷ್ಟ್ರೀಯ ಸ್ವತ್ತು ಎಂಬಂತೆ ರಾಷ್ಟ್ರಪತಿ ಭವನ, ಪ್ರಧಾನ ಮಂತ್ರಿಗಳ ಮನೆ ಅಥವಾ ರಾಜಭವನದಲ್ಲಿ ಇರಿಸಲಾಗುವುದು. (ಟಿಪ್ಪಣಿ:- ಕಾಣಿಕೆಯ ಬೆಲೆ ಎಂಬುದು, ಅದು ಉತ್ಪಾದಿತವಾದ ದೇಶದಲ್ಲಿಯ ಅದರ ಅಂದಾಜು ಮಾರುಕಟ್ಟೆ ಮೌಲ್ಯವನ್ನು ಸೂಚಿಸುತ್ತದೆ).

೪.೩ ಒಬ್ಬ ಸಚಿವರಿಗೆ ಸ್ಥಾನಮಾನ:-

ದರ್ಜೆಯನ್ನು ಹೊಂದಿರುವ ಒಬ್ಬ ವ್ಯಕ್ತಿಗೆ ಒಂದು ಸಂಘ ಸಂಸ್ಥೆಯು ಪ್ರಶಸ್ತಿಯೊಂದನ್ನು ನೀಡುವ ಸಂದರ್ಭದಲ್ಲಿ ಈ ಮುಂದಿನ ವಿಧಾನವನ್ನು ಅನುಸರಿಸಬೇಕು:-

ಎ) ಪ್ರಶಸ್ತಿಯನ್ನು ನೀಡುತ್ತಿರುವ ಸಂಘ ಸಂಸ್ಥೆಯು ವಿಶ್ವಾಸನೀಯತೆಯನ್ನು ಪರಿಶೀಲಿಸಬೇಕು;

ಬಿ) ಪ್ರಶಸ್ತಿ ನೀಡುತ್ತಿರುವ ಸಂಸ್ಥೆಯು ವಿಶ್ವಾಸನೀಯತೆಯು ಸಂಶಯಾತೀತವಾಗಿದ್ದರೆ ಪ್ರಶಸ್ತಿಯನ್ನು ಸ್ವೀಕರಿಸಬಹುದು, ಆದರೆ ಅದರ ನಗದು ಭಾಗವನ್ನು ಸ್ವೀಕರಿಸತಕ್ಕುದಲ್ಲ;

ಸಿ) ಪ್ರಶಸ್ತಿಯು, ಸಚಿವರಾಗಿ ಅಧಿಕಾರವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ, ವ್ಯಕ್ತಿಯು ಮಾಡಿದ ಕಾರ್ಯಕ್ಕೆ ಸಂಬಂಧಪಟ್ಟದ್ದುದಾಗಿದ್ದರೆ, ಅಂತಹ ಪ್ರಶಸ್ತಿಗಳನ್ನು ಒಪ್ಪಿಕೊಳ್ಳಬಹುದು. ಆದರೆ, ಅಂತಹ ಎಲ್ಲ ಸಂದರ್ಭಗಳಲ್ಲಿ, ಪ್ರಧಾನಮಂತ್ರಿಯವರ ಅಥವಾ ಸಂದರ್ಭಾನುಸಾರ ಮುಖ್ಯಮಂತ್ರಿಯವರ ಅನುಮೋದನೆಯನ್ನು ಪಡೆಯಬೇಕು. ಮುಖ್ಯಮಂತ್ರಿಯವರು ಮತ್ತು ಇತರ ಸಚಿವರು ಪ್ರಧಾನ ಮಂತ್ರಿಯವರ ಮತ್ತು ಕೇಂದ್ರ ಗೃಹ ಸಚಿವರ ಅನುಮೋದನೆಯನ್ನು ಪಡೆಯಬೇಕಾಗುತ್ತದೆ, ಮತ್ತು

ಡಿ) ಯಾವುದೇ ವಿದೇಶೀ ವಿಚಿನ್ನಿಗಳು: ಸಂಘ ಸಂಸ್ಥೆಗಳೊಂದಿಗೆ ಸಂಬಂಧವನ್ನು ಹೊಂದಿರುವ ಯಾವುದೇ ಸಂಘ ಸಂಸ್ಥೆಗಳಿಂದ ಯಾವುದೇ ಪ್ರಶಸ್ತಿಯನ್ನು ಸಚಿವರು ಪಡೆಯಬೇಕಾದಂಥ ಸಂದರ್ಭಗಳಲ್ಲಿ, ಅಂತಹ ಸಚಿವರು: ಸಚಿವ ಸ್ಥಾನಮಾನದ: ದರ್ಜೆಯ ವ್ಯಕ್ತಿ, ಭಾರತದ ಪ್ರಧಾನ ಮಂತ್ರಿಯವರ ಪೂರ್ವ ಅನುಮೋದನೆಯನ್ನು ಪಡೆಯಬೇಕಾಗುತ್ತದೆ.

೪.೪ ವಿದೇಶೀ ನಿಯೋಗಗಳು ಭಾರತದಲ್ಲಿ ಅಥವಾ ವಿದೇಶದಲ್ಲಿ ಏರ್ಪಡಿಸುವ ಸಮಾರಂಭಗಳಿಗೆ ಹಾಜರಾಗುವುದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಮತ್ತು ವಿಶ್ವ ಸಂಸ್ಥೆಯನ್ನು ಹೊರತು ಪಡಿಸಿ, ಭಾರತವು ಸದಸ್ಯ ರಾಷ್ಟ್ರವಾಗಿರುವ ಯಾವುದೇ ವಿದೇಶೀ ಟ್ರಸ್ಟ್, ಸಂಸ್ಥೆ ಅಥವಾ ಸಂಘ ಸದಸ್ಯತ್ವವನ್ನು ಒಪ್ಪಿಕೊಳ್ಳುವ ಸಂಬಂಧದಲ್ಲೂ ಸಹ ಕಾಲಕಾಲಕ್ಕೆ ಪ್ರಧಾನಮಂತ್ರಿಯವರು ನೀಡುವ ಸೂಚನೆಗಳನ್ನು ಸಚಿವರು ಅನುಸರಿಸಬೇಕು.

೫. ಸಚಿವರು:-

ಎ) ಕರ್ತವ್ಯದ ಮೇಲೆ ಪ್ರವಾಸದಲ್ಲಿರುವಾಗ ಸಾಧ್ಯವಾದಷ್ಟು ಮಟ್ಟಿಗೆ ತನಗೆ ಸೇರಿದ ಅಥವಾ ಸರ್ಕಾರ, ಸರ್ಕಾರದ ಉದ್ಯಮಗಳು, ಸಾರ್ವಜನಿಕ ನಿಕಾಯಗಳು, ಅಥವಾ ಸಂಸ್ಥೆಗಳು ನಿರ್ವಹಿಸುತ್ತಿರುವ ವಿಶ್ರಾಂತಿ ಗೃಹಗಳಲ್ಲಿ (ವಿಶ್ರಾಂತಿ ಭವನ,ಪ್ರವಾಸಿ ಮಂದಿರ ಮುಂತಾದವುಗಳು) ಅಥವಾ ಮಾನ್ಯತೆ ಪಡೆದ ಹೋಟೆಲುಗಳಲ್ಲಿ ಉಳಿದುಕೊಳ್ಳಬೇಕು; ಮತ್ತು

ಬಿ) ಸಾಧ್ಯವಾದಷ್ಟು ಮಟ್ಟಿಗೆ ಅವರ ಗೌರವಾರ್ಥವಾಗಿ ಏರ್ಪಡಿಸುವ ಅಡಂಬರಯುತವಾದ ಅಥವಾ ಅದ್ದೂರಿಯಾದ ಸಮಾರಂಭಗಳಲ್ಲಿ ಭಾಗವಹಿಸಬಾರದು.

೬. ನೀತಿ ಸಂಹಿತೆಯ ಪಾಲನೆಯನ್ನು ಖಚಿತಪಡಿಸಿಕೊಳ್ಳುವ ಪ್ರಾಧಿಕಾರಿಯು, ಕೇಂದ್ರ ಮಂತ್ರಿಗಳ ವಿಷಯದಲ್ಲಿ ಪ್ರಧಾನ ಮಂತ್ರಿಯವರು, ಮುಖ್ಯಮಂತ್ರಿಯವರ ವಿಷಯದಲ್ಲಿ ಪ್ರಧಾನ ಮಂತ್ರಿಯವರು ಹಾಗೂ ಕೇಂದ್ರ ಗೃಹ ಸಚಿವರು ಮತ್ತು ಅನ್ಯಥಾ ನಿರ್ದಿಷ್ಟಪಡಿಸಿದ್ದ ಹೊರತು ರಾಜ್ಯ ಸಚಿವರ ಸಂಬಂಧದಲ್ಲಿ ಮುಖ್ಯಮಂತ್ರಿಯವರು ಆಗಿರುತ್ತಾರೆ. ಅಂಥ ಪ್ರಾಧಿಕಾರಿಯು ಈ ನೀತಿ ಸಂಹಿತೆಯ ಯಾವುದೇ ಆರೋಪಿತ ಅಥವಾ ಸಂದೇಹಿತ ಉಲ್ಲಂಘನೆಯ ಬಗ್ಗೆ ವ್ಯವಹರಿಸುವಾಗ ಅಥವಾ ನಿರ್ಧರಿಸುವಾಗ ಪ್ರತಿ ಸಂದರ್ಭದ ವಾಸ್ತವಾಂಶಗಳನ್ನು ಮತ್ತು ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತವೆಂದು ತಾನು ಭಾವಿಸುವಂಥ ಕಾರ್ಯವಿಧಾನವನ್ನು ಅನುಸರಿಸುತ್ತಾರೆ.

ವಿವರಣೆ:- ಈ ಸಂಹಿತೆಯಲ್ಲಿ ಸಚಿವರ ಕುಟುಂಬ ಎಂಬುದು ಅವರಿಂದ ಕಾನೂನು ರೀತ್ಯ ಬೇರ್ಪಟ್ಟಿಲ್ಲದೆ, ಅವರ ಪತ್ನಿ (ಸಂದರ್ಭಾನುಸಾರ ಅವರ ಪತಿ) ಅಪ್ರಾಪ್ತ ವಯಸ್ಸಿನ ಮಕ್ಕಳು ಸಚಿವರಿಗೆ ರಕ್ತ ಸಂಬಂಧಿಗಳಾದ ಅಥವಾ ವಿವಾಹದ ಮೂಲಕ ಸಂಬಂಧಿಗಳಾದ ಮತ್ತು ಸಂಪೂರ್ಣವಾಗಿ ಅವರ ಮೇಲೆ ಅವಲಂಬಿತವಾದ ಇತರ ವ್ಯಕ್ತಿಗಳು).

ವಿಷಯ:- ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೪:- (೫೦೬)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಯುವಜನಸೇವೆ ಕ್ರೀಡೆ ಮತ್ತು ದೈಹಿಕ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕ್ರೀಡಾಂಗಣಗಳೆಷ್ಟು?
ಆ) ಪ್ರತಿ ತಾಲ್ಲೂಕಿನಲ್ಲೂ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಉದ್ದೇಶಿಸಿರುವುದೇ?

ಡಾ: ಡಿ. ಪ್ರೇಮಚಂದ್ರ ಸಾಗರ್
(ಯುವಜನಸೇವಾ ಕ್ರೀಡೆ ಮತ್ತು ದೈಹಿಕ ಶಿಕ್ಷಣ ಸಚಿವರು).

೧೯.
ಹೌದು.

ವಿಷಯ:- ಚಾಮರಾಜನಗರ ತಾಲ್ಲೂಕನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿಸಲು ಕೈಗೊಂಡಿರುವ ಕ್ರಮಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೫:- (೫೦೭)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಪರಿಸರ, ಜೀವಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಮಲೆನಾಡು ಅಭಿವೃದ್ಧಿ ಮಂಡಳಿಗೆ ಮೈಸೂರು ಜಿಲ್ಲಾ ಚಾಮರಾಜನಗರ ತಾಲ್ಲೂಕನ್ನು ಸೇರಿಸುವ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮಗಳೇನು?
ಬಿ) ಮಲೆನಾಡು ಅಭಿವೃದ್ಧಿ ಮಂಡಳಿ ಹಾಗೂ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿರುವ ವಿಶೇಷ ಅಧಿಕಾರಗಳು ಏನು?

ಶ್ರೀ ಎನ್.ಜಿ. ಹಾಲಪ್ಪ
(ಪರಿಸರ ಮತ್ತು ಜೀವಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು).

ಯೋಜನಾ ಇಲಾಖೆಯ ಅಧಿಕಾರಿಗಳ ತಂಡ ಚಾಮರಾಜನಗರ ತಾಲ್ಲೂಕಿಗೆ ಭೇಟಿ ನೀಡಿ ತಯಾರಿಸಿದ ವರದಿ ಪರಿಶೀಲನೆಯಲ್ಲಿದೆ.

ಈ ಮಂಡಳಿಗಳಿಗೆ ಯಾವುದೇ ವಿಶೇಷ ಅಧಿಕಾರಗಳನ್ನು ನೀಡಿಲ್ಲ.

ವಿಷಯ:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊಸ ಬಡಾವಣೆಗಳ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೬:- (೫೦೮)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?